

ಆಲ್‌ಫ್ರೆಡ್ ಟೆನಿಸನ್‌ನ 'ಲೇಡಿ ಕ್ಲೇರ್' ಎಂಬ ಹೆಸರಿನ ಕವಿತೆ, ಹೆಣ್ಣುಮನಸ್ಸಿನ ಚಂಚಲತೆಯನ್ನು ಅಸ್ಥಿರ ಭಾವವನ್ನು ಬಿಂಬಿಸುತ್ತದೆ.

ಲಕಲಕ ಹೊಳೆಯುವ ಹೊಸ ಕರೆನ್ಸಿ ನೋಟಗಳು, ನವವಧುವಿನ ತೆರದಿ, ಹೆಜ್ಜೆಯ ಮೇಲೆ ಹೆಜ್ಜೆಯನಿಡುತ್ತಾ ಬರುತ್ತಿದ್ದಂತೆಯೇ ಹಳೆಯ ಕರೆನ್ಸಿಗಳು ಕುರೂಪಗೊಂಡು ತಮ್ಮ ಕಿಮ್ಮತ್ತು ಕಳೆದುಕೊಂಡಿದ್ದವು. ಕಾಳಧನಿಕರ ಕಾಲುಗಳು ಥರಥರ ನಡುಗಿದವು. ಅವರ ಎದೆಗೂಡಲ್ಲಿ ಢವಢವ ಅವಲಕ್ಕಿ ಕುಟ್ಟುತ್ತಿರುವ ಶಬ್ದ. ಅಡುಗೆ ಮನೆಯಲ್ಲಿ, ಗೃಹಿಣಿಯರ ಜೀರಿಗೆ, ಸಾಸಿವೆ ಡಬ್ಬಿಗಳಲ್ಲಿ ಗೃಹಬಂಧನಕ್ಕೆ ಒಳಗಾದವು. ಸಾವಿರದ ಐದ್ನೂರರ ಹಳೆಯ ನೋಟುಗಳಿಗೆ ಅಚಾನಕ್ ಬಿಡುಗಡೆಯ ಭಾಗ್ಯ ಒದಗಿತ್ತು. ಶಾಪ ವಿಮೋಚನೆಗೊಂಡ ಅಹಲ್ಯೆಯಂತೆ, ಹೊಸ ರೂಪದಲ್ಲಿ ಕಾಣಿಸಿಕೊಳ್ಳಲು ಅವೂ ಕೂಡ ಉತ್ಸಾಹ ತೋರಿದವು. ಮತ್ತೆ ಹಣವಂತರಿಗೆ ಹೌಸಿಯೋ ಹೌಸಿ. ಬೆಲ್ಲಕ್ಕೆ ಇರುವೆಗಳು ಮನ ಸೋಲುವಂತೆ. ನಮ್ಮ ಅಜ್ಜಿಯ ಬಳಿ ಒಂದಿಷ್ಟು ಹಣದ ಸಣ್ಣ ಗಂಟಿತ್ತು. ಆ ಗಂಟಿನಲ್ಲಿ ಬರೀ ಐನೂರರ ಹಳೆಯ ನೋಟುಗಳೇ ತುಂಬಿಕೊಂಡಿದ್ದವು. ಎಲ್ಲ ಕೂಡಿ ಒಟ್ಟು ಹತ್ತು ಹನ್ನೆರಡು ಸಾವಿರ ಇದ್ದೀತು. ಆದರೆ, ರಾತ್ರೋರಾತ್ರಿ ಅಜ್ಜಿಯ ಆ ಗಂಟು ತನ್ನ ಬೆಲೆ ಕಳೆದುಕೊಂಡು, ಕಿಮ್ಮತ್ತುಗೇಡಿಯಾಗಿತ್ತು. ಅಜ್ಜಿ ಹೌಹಾರಿತು.

'ತಂಮಾ, ಹ್ಯಾಂಗಾದ್ರೂ ಮಾಡಿ, ಹಳೀದು ಬದ್ಲ ಮಾಡಿ, ಹೊಸಾದು ತಗೊಂಡ ಬಾರೋ' ಎಂದು ದುಂಬಾಲು ಬಿದ್ದಳು. 'ಅಜ್ಜೀ, ಇದು ನಿನ್ನ ಗಂಟಾ, ಅದನ್ಯಾಕೆ ಬದ್ಲಸ್ತೀ ಸುಮ್‌ಸುಮ್ನ್' ಅಂತ ನಾನು ಚೇಷ್ಟೆ ಮಾಡಿದರೆ, 'ಹೊಗ್ಗೋ ಹುಚ್ಚಪ್ಪಾ,